

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಹಮ್ರಾಉಲ್ ಅಸದ್ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–05–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ. بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಮ್‌ರಾಉಲ್ ಅಸದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಉಹುದ್ ಯುದ್ಧದಿಂದ ಮದೀನಕ್ಕೆ ಮರಳಿದ್ದು ಮತ್ತು ಹಮ್‌ರಾಉಲ್ ಅಸದ್ ಯುದ್ಧಕ್ಕೆ ಸಂಬಂಧಪಟ್ಟು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಪ್ರಸ್ತಾಪವನ್ನು ನಾನು ವಿವರಿಸುತ್ತೇನೆ. ಅವರು ಹೇಳುತ್ತಾರೆ: ಉಹುದ್ ಯುದ್ಧದಿಂದ ಮರಳಿದ ರಾತ್ರಿಯು ತೀವ್ರ ಭಯದ ಒಂದು ರಾತ್ರಿಯಾಗಿತ್ತು. ಏಕೆಂದರೆ, ಬಾಹ್ಯ ದೃಷ್ಟಿಯಲ್ಲಿ ಖುರೈಶಿನ ಸೈನ್ಯ ಮಕ್ಕದ ಕಡೆಗೆ ಹೋಗಿದ್ದರೂ ಕೂಡ ಮಕ್ಕಕ್ಕೆ ಮರಳಿದ್ದಾಗಿ ಮುಸ್ಲಿಮರು ಭಾವಿಸಲಿ ಎಂಬ ಉದ್ದೇಶದಿಂದ ಹಾಗೆ ಮಾಡಿರಬಹುದು ಎಂಬ ಸಂಶಯವಿತ್ತು. ಆದ್ದರಿಂದ ಮದೀನದಲ್ಲಿ ಅಂದು ರಾತ್ರಿ ಕಾವಲಿನ ಏರ್ಪಾಡು ಮಾಡಲಾಯಿತು. ಹಝ್ರತ್ ಪೈಗಂಬರ್(ಸ)ರ ಮನೆಗೂ ಸಹಾಬಿಯರು ವಿಶೇಷವಾದ ಕಾವಲು ನೀಡಿದರು. ಈ ಸಂಶಯ ಸರಿಯಾಗಿತ್ತು ಎಂದು ಬೆಳಗಾದಾಗ ತಿಳಿದುಬಂತು. ಏಕೆಂದರೆ, ಖುರೈಶಿನ ಸೈನ್ಯ ಮದೀನದಿಂದ ಕೆಲವು ಮೈಲುಗಳಷ್ಟು ದೂರ ಹೋಗಿ ತಂಗಿರುವುದಾಗಿ ಬೆಳಿಗ್ಗೆ ಆಗುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಖುರೈಶಿನ ಸರದಾರರು ಚರ್ಚೆ ಮಾಡುತ್ತಿದ್ದರು. ಒಂದು ಗುಂಪು ಹೀಗೆ ಹೇಳುತ್ತಿತ್ತು: 'ನೀವು ಮುಹಮ್ಮದನ್ನು ವಧಿಸಿಲ್ಲ, ಮುಸ್ಲಿಮ್ ಮಹಿಳೆಯರನ್ನು ದಾಸಿಯರನ್ನಾಗಿ ಮಾಡಿಯೂ ಇಲ್ಲ. ಮುಸ್ಲಿಮರ ಸಂಪತ್ತನ್ನೂ ವಶಪಡಿಸಿಲ್ಲ, ಬದಲಾಗಿ ನೀವು ವಿಜಯ ಸಾಧಿಸಿಯೂ ಅವರನ್ನು ಹಾಗೆಯೇ ಬಿಟ್ಟು ಬಂದಿದ್ದೀರಿ. ಆದ್ದರಿಂದ ಅವರು ಪುನಃ ಸುಶಕ್ತರಾಗಿ ನಿಮ್ಮನ್ನು ಹಿಡಿಯುವರು. ಒಟ್ಟಿನಲ್ಲಿ, ಈಗಲೂ ಅವಕಾಶವಿದೆ. ನೀವು ಮರಳಿ ಹೋಗಿರಿ ಮತ್ತು ಮದೀನದ ಮೇಲೆ ದಾಳಿ ನಡೆಸಿ ಮುಸ್ಲಿಮರ ಬೇರನ್ನು ಕತ್ತರಿಸಿರಿ.' ಆದರೆ ಮತ್ತೊಂದು ಗುಂಪು ಹೀಗೆ ಹೇಳುತ್ತಿತ್ತು: 'ನಿಮಗೆ ಲಭಿಸಿದ ವಿಜಯವನ್ನೇ ಸೌಭಾಗ್ಯವೆಂದು ಭಾವಿಸಿ ಮರಳಿ ಹೋಗಿರಿ. ಈ ವಿಜಯ ಕೂಡ ಪರಾಜಯವಾಗದಿರಲಿ.' ಹಝ್ರತ್ ಪೈಗಂಬರ್(ಸ)ರಿಗೆ ಇದರ ಸುದ್ದಿ ಲಭಿಸಿದಾಗ ಬೇಗನೇ ಹೊರಡಲು ಘೋಷಣೆ ಮಾಡಿಸಿದರು ಮತ್ತು ಉಹುದ್ ಯುದ್ಧಕ್ಕೆ ಹೋದವರು ಹೊರತು ಬೇರೆ ಯಾರೂ ನಮ್ಮ ಜೊತೆಗೆ ಹೊರಡದಿರಲಿ ಎಂದೂ ನಿರ್ದೇಶನ ನೀಡಿದರು. ಉಹುದಿನ ಯೋಧರು ತಮ್ಮ ಗಾಯಗಳಿಗೆ ಮದ್ದು ಕಟ್ಟಿ ತಮ್ಮ ಪ್ರಿಯ ನೇತಾರನೊಂದಿಗೆ ಹೊರಟರು. ಎಂಟು ಮೈಲುಗಳ ದೂರವನ್ನು ದಾಟಿ ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದಿಗೆ ತಲುಪಿದರು. ಅಲ್ಲಿ ಅವರು ಬೆಂಕಿಯನ್ನು ಉರಿಸಲು ಆದೇಶ ನೀಡಿದರು. ಹೀಗೆ ಐನೂರು ಬೆಂಕಿಯ ಒಲೆಗಳನ್ನು ಉರಿಸಲಾಯಿತು. ಅಲ್ಲಿ ಮುಶ್ರಿಕ್ ಸರದಾರನಾದ ಮಅ್‌ಬದ್ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾದನು. ಅನಂತರ ಆತನು ಮರಳಿ ಹೋಗಿ ತನ್ನ ಮಾತುಗಳಿಂದ ಅಬೂಸುಫ್‌ಯಾನ್ ಮತ್ತು ಖುರೈಶಿನ ಇತರ ಸರದಾರರ ಧೈರ್ಯಗುಂದಿಸಿದನು. ಮಅ್‌ಬದಿನ ಮಾತುಗಳಿಂದ ಎಂತಹ ಗಾಬರಿಯ ಸ್ಥಿತಿ ಉಂಟಾಯಿತು ಎಂದರೆ, ಅವರು ಮದೀನದ ಮೇಲೆ ದಾಳಿ ನಡೆಸುವ ಉದ್ದೇಶವನ್ನು ಕೈಬಿಟ್ಟು ಮಕ್ಕಾದ ಕಡೆಗೆ ಮರಳಿದರು.

ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದ್‌ನಲ್ಲಿ ಎರಡು ಮೂರು ದಿನಗಳು ತಂಗಿದರು ಮತ್ತು ಒಟ್ಟು ಐದು ದಿನಗಳ ನಂತರ ಮದೀನಕ್ಕೆ ತಲುಪಿದರು. ಉಹುದ್ ಯುದ್ಧದ ಫಲಿತಾಂಶದ ಕುರಿತು ಚರಿತ್ರೆಗಾರರು ಬಹಳ ದೀರ್ಘವಾಗಿ ಚರ್ಚಿಸಿರುವರು. ಕೆಲವು ಚರಿತ್ರೆಗಾರರು ಅದನ್ನು ಪರಾಜಯವಾಗಿ ಗಣಿಸುತ್ತಾರೆ. ಕೆಲವರು ಅದನ್ನು ಪರಾಜಯವಾಗಿ ಹೇಳಲು ಹಿಂಜರಿಯುತ್ತಾರೆ. ಅವರು ಎರಡೂ ಅಲ್ಲದ ಒಂದು ಅಭಿಪ್ರಾಯವನ್ನು ಇರಿಸಲು ಬಯಸುತ್ತಾರೆ. ಅದನ್ನು ಪರಾಜಯದ ನಂತರದ ವಿಜಯವಾಗಿ ಗಣಿಸುವ ಕೆಲವರೂ ಇದ್ದಾರೆ. ನಿಜವೇನೆಂದರೆ, ಆ ಕಾಲದ ಯುದ್ಧ ನಿಯಮಗಳು ಮತ್ತು ಸಂಪ್ರದಾಯದ ಪ್ರಕಾರ ಅದನ್ನು ಪರಾಜಯವೆಂದು ಕರೆಯಲು ಸಾಧ್ಯವಲ್ಲ. ಏಕೆಂದರೆ ಅಬೂಸುಫ್‌ಯಾನ್ ಘೋಷಣೆ ಕೂಗುತ್ತಾ ಮೈದಾನದಿಂದ ಹೊರಡುವಾಗಲೂ ಮುಸ್ಲಿಮರು ಯುದ್ಧ ಮೈದಾನದಲ್ಲಿ ಇದ್ದರು. 'ಇಂದಿನ ದಿನ ಬದ್ರ್ ಯುದ್ಧದ ಪ್ರತೀಕಾರವಾಗಿದೆ' ಎಂದು ಅಬೂಸುಫ್‌ಯಾನ್ ಪೊಳ್ಳು ಘೋಷಣೆ ಕೂಡ ಕೂಗಿದನು. ಆದರೆ ಅದು ಬದ್ರ್ ಯುದ್ಧದ ಪ್ರತೀಕಾರ ಹೇಗೆ ಆಗುವುದು? ಬದ್ರ್ ಯುದ್ಧದಲ್ಲಿ ಮುಸ್ಲಿಮರು ಸತ್ಯನಿಷೇಧಿಗಳ ದೊಡ್ಡ ದೊಡ್ಡ ಸರದಾರರನ್ನು ವಧಿಸಿದ್ದರು. ಅವರಿಗೆ ಅಪಾರ ಯುದ್ಧ ಸಂಪತ್ತು ಲಭಿಸಿತ್ತು. ಸತ್ಯನಿಷೇಧಿಗಳ ಎಪ್ಪತ್ತು ಮಂದಿಗಳನ್ನು ಬಂಧಿಸಲಾಗಿತ್ತು. ಅದೇ ರೀತಿಯಲ್ಲಿ ಬದ್ರ್‌ನಲ್ಲಿ ಮುಸ್ಲಿಮರು ವಿಜಯಿಗಳಾಗಿ ರೂಢಿಯಂತೆ ಅಲ್ಲಿ ಮೂರು ದಿನಗಳು ತಂಗಿದ್ದರು. ಆದರೆ ಉಹುದಿನಲ್ಲಿ ಸತ್ಯನಿಷೇಧಿಗಳಿಗೆ ಈ ಸಂಗತಿಗಳಲ್ಲಿ ಯಾವುದೇ ಒಂದು ಕೂಡ ಲಭಿಸಲಿಲ್ಲ. ಹೀಗಿರುವಾಗ ಇದು ಬದ್ರಿಗೆ ಪ್ರತೀಕಾರ ಹೇಗೆ ಆಗುವುದು? ಆದರೆ ಉಹುದಿನಲ್ಲಿ ಮೊದಲ ಹಂತದಲ್ಲಿ ವಿಜಯದ ನಂತರ ಎರಡನೇ ಹಂತದಲ್ಲಿ ಮುಸ್ಲಿಮರಿಗೆ ಕಠಿಣವಾದ ಜೀವ ನಷ್ಟ ಉಂಟಾಯಿತು ಎಂಬುದು ಸರಿಯೇ ಆಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಸ್ಥಾಯಿಯಾದ ಪರಿಣಾಮಗಳ ದೃಷ್ಟಿಯಲ್ಲಿ ಉಹುದ್

ಯುದ್ಧವು ಬದ್ರ್ ಯುದ್ಧದ ಮುಂದೆ ಏನೂ ಅಲ್ಲ. ಆದರೆ ತಾತ್ಕಾಲಿಕವಾಗಿ ಈ ಯುದ್ಧ ಖಂಡಿತವಾಗಿಯೂ ಮುಸ್ಲಿಮರಿಗೆ ನಷ್ಟವನ್ನು ಉಂಟು ಮಾಡಿತು. ಮೊದಲನೆಯದಾಗಿ ಮುಸ್ಲಿಮರ ಎಪ್ಪತ್ತು ವ್ಯಕ್ತಿಗಳು ಶಹೀದ್ ಆದರು. ಅವರಲ್ಲಿ ಕೆಲವು ಶ್ರೇಷ್ಠ ಸಹಾಬಿಯರು ಕೂಡ ಒಳಪಡುತ್ತಾರೆ. ಗಾಯಾಳುಗಳ ಸಂಖ್ಯೆ ಬಹಳ ಅಧಿಕವಾಗಿತ್ತು. ಎರಡನೆಯದಾಗಿ, ಬದ್ರ್ ಯುದ್ಧದ ಪರಿಣಾಮವಾಗಿ ಗಾಬರಿಗೊಂಡಿದ್ದ ಮದೀನದ ಯಹೂದಿಯರು ಮತ್ತು ಕಪಟವಿಶ್ವಾಸಿಗಳು ಈಗ ಸ್ವಲ್ಪ ನಿರ್ಭೀತಗೊಂಡಿದ್ದರು. ಮೂರನೆಯದಾಗಿ 'ನಾವು ಕೇವಲ ಸೇಡು ತೀರಿಸಿದ್ದಲ್ಲ, ಬದಲಾಗಿ ಮುಂದೆ ಎಂದಾದರೂ ಒಟ್ಟಾಗಿ ದಾಳಿ ನಡೆಸಿದರೆ ಮುಸ್ಲಿಮರನ್ನು ಸೋಲಿಸುವೆವು.' ಎಂದು ಅವರು ಭಾವಿಸಿಕೊಂಡರು. ನಾಲ್ಕನೆಯದಾಗಿ ಸಾಮಾನ್ಯ ಗೋತ್ರಗಳು ಕೂಡ ಉಹುದ್ ಯುದ್ಧದ ನಂತರ ಹೆಚ್ಚು ಧೈರ್ಯದಿಂದ ತಲೆ ಎತ್ತಲು ಶುರುಮಾಡಿದುವು. ಆದರೆ ಈ ನಷ್ಟಗಳಿದ್ದೂ ಕೂಡ ಒಂದು ಸ್ಪಷ್ಟವಾದ ಸತ್ಯವೇನೆಂದರೆ, ಬದ್ರ್ ಯುದ್ಧದಲ್ಲಿ ಖುರೈಶಿಯರಿಗೆ ಉಂಟಾದ ನಷ್ಟಗಳು ಉಹುದ್ ಯುದ್ಧದ ವಿಜಯದಿಂದ ಪರಿಹಾರಗೊಳ್ಳದು.

ಉಹುದಿನಲ್ಲಿ ಉಂಟಾದ ನಷ್ಟಗಳು ಒಂದು ರೀತಿಯಲ್ಲಿ ಮುಸ್ಲಿಮರಿಗೆ ಬಹಳ ಉಪಯುಕ್ತವಾಯಿತು. ಏಕೆಂದರೆ, ಹಝ್ರತ್ ಪೈಗಂಬರ್(ಸ)ರ ಇಚ್ಛೆ ಮತ್ತು ನಿರ್ದೇಶನಕ್ಕೆ ವಿರುದ್ಧವಾಗಿ ಹೆಜ್ಜೆ ಹಾಕುವುದು ಎಂದಿಗೂ ವಿಜಯಕ್ಕೂ ಅಭಿವೃದ್ಧಿಗೂ ಕಾರಣವಾಗದು ಎಂದು ಮುಸ್ಲಿಮರಿಗೆ ಹಗಲಿನ ಬೆಳಕಿನಂತೆ ಸ್ಪಷ್ಟವಾಯಿತು. ಮದೀನದಲ್ಲಿ ತಂಗಬೇಕು ಎಂಬ ಅಭಿಪ್ರಾಯವನ್ನು ಹಝ್ರತ್ ಪೈಗಂಬರ್(ಸ) ಹೊಂದಿದ್ದರು. ಈ ಸಂಬಂಧವಾಗಿ ತನ್ನ ಒಂದು ಕನಸನ್ನು ಕೂಡ ಅವರು ತಿಳಿಸಿದ್ದರು. ಆದರೆ ಮದೀನದಿಂದ ಹೊರಗೆ ಹೋಗಿ ಯುದ್ಧ ಮಾಡಲು ಜನರು ಒತ್ತಾಯಪಡಿಸಿದರು. ಹಝ್ರತ್ ಪೈಗಂಬರ್(ಸ) ಕೆಲವು ಜನರನ್ನು ಉಹುದಿನ ಒಂದು ಗುಡ್ಡೆಯಲ್ಲಿ ನಿಲ್ಲಿಸಿದರು ಮತ್ತು ಆ ಜಾಗವನ್ನು ಬಿಡಬಾರದು ಎಂದು ಬಹಳವಾಗಿ ತಾಕೀತು ಮಾಡಿದ್ದರು. ಆದರೆ ಯುದ್ಧ ಸಂಪತ್ತಿನ ಚಿಂತೆಯಿಂದ ಆ ಜಾಗವನ್ನು ಅವರು ಖಾಲಿಯಾಗಿ ಬಿಟ್ಟರು. ಒಟ್ಟಿನಲ್ಲಿ ಉಹುದಿನ ಸೋಲು ಒಂದು ರೀತಿಯಲ್ಲಿ ನೋವಿಗೆ ಕಾರಣವಾಗಿದ್ದರೂ ಮತ್ತೊಂದು ರೀತಿಯಲ್ಲಿ ಮುಸ್ಲಿಮರಿಗೆ ಅದು ಒಂದು ಉಪಯುಕ್ತವಾದ ಪಾಠವಾಯಿತು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಒಂದು ಭಾಷಣದಲ್ಲಿ ಉಹುದ್ ಯುದ್ಧ ಮತ್ತು ಹಮ್‌ರಾಉಲ್ ಅಸದ್‌ನ ಘಟನೆಗಳ ಒಂದು ವಿಶ್ಲೇಷಣೆ ನಡೆಸಿದ್ದಾರೆ. ಅದರ ಕೆಲವು ಮುಖ್ಯಾಂಶಗಳು ಹೀಗಿವೆ: 1. ಮುಸ್ಲಿಮರಿಂದ ಸೋಲಿನ ಭಾವನೆಯನ್ನು ಪೂರ್ಣವಾಗಿ ಅಳಿಸಿಹಾಕಲು ಇದಕ್ಕಿಂತ ಉತ್ತಮವಾದ ಬೇರೆ ಹೆಜ್ಜೆ (ಹಮ್‌ರಾಉಲ್ ಅಸದ್ ಯುದ್ಧಕ್ಕಾಗಿ ಹೋಗುವುದಕ್ಕಿಂತ ಉತ್ತಮವಾದ ಹೆಜ್ಜೆ) ಸಾಧ್ಯವಿರಲಿಲ್ಲ. 2. ಆಯಾಸಗೊಂಡಿರದ ಯುವಕರಿಗೆ ಮತ್ತು ಹೊಸ ಯೋಧರಿಗೆ ಈ ಯುದ್ಧಕ್ಕಾಗಿ ಹೋಗಲು ಅನುಮತಿ ಕೊಡದೇ ಹಝ್ರತ್ ಪೈಗಂಬರ್(ಸ) ತನಗೆ ನಿಜವಾದ ಭರವಸೆ ತನ್ನ ಪ್ರಭುವಿನ ಮೇಲೆ ಮಾತ್ರವಾಗಿದೆ ಎಂದು ಸಾಬೀತು ಪಡಿಸಿದರು. 3. ಉಹುದ್ ಯುದ್ಧದಲ್ಲಿ ಚಂಚಲಗೊಂಡಿದ್ದ ಸಹಾಬಿಯರನ್ನು ಹಝ್ರತ್ ಪೈಗಂಬರ್(ಸ) ಸಾಂತ್ವನಪಡಿಸಿದರು ಮತ್ತು ಅವರ ಮೇಲೆ ಪೂರ್ಣವಾದ ವಿಶ್ವಾಸವನ್ನು ಇರಿಸಿಕೊಂಡರು. 4. ಹಝ್ರತ್ ಪೈಗಂಬರ್(ಸ)ರಿಗೆ ಉಹುದಿನ ಸಹಾಬಿಯರ ಮೇಲೆ ಇದ್ದ ಪರಿಪೂರ್ಣ ವಿಶ್ವಾಸವು ಕೇವಲ ಭಾವುಕರಾಗಿ ಮಾಡಿದ ತೀರ್ಮಾನವಾಗಿರಲಿಲ್ಲ. ಬದಲಾಗಿ ಉಹುದ್ ಯುದ್ಧದ ಮರುದಿನವೇ ಶತ್ರುಗಳನ್ನು ಹಿಂಬಾಲಿಸಲು ಮಾಡಿದ ಹಝ್ರತ್ ಪೈಗಂಬರ್(ಸ)ರ ತೀರ್ಮಾನ ತನ್ನ ಸಂಗಡಿಗರ ಮೇಲೆ ಮಾಡಿದ ಒಂದು ಮಹತ್ತಾದ ಉಪಕಾರವಾಗಿದೆ. ಹೀಗೆ ಎಂದಿಗೂ ಯಾವನೇ ಸೇನಾಧಿಪತಿ ತನ್ನ ಸೇನೆಯ ಮೇಲೆ ಮಾಡಿಲ್ಲ. ಹೀಗೆ ಉಹುದ್ ಯುದ್ಧದಲ್ಲಿ ಮಾಡಿದ ವರ್ತನೆಯಿಂದ ಸಹಾಬಿಯರಿಗೆ ಉಂಟಾದ ನೋವಿಗೆ ಪರಿಪೂರ್ಣವಾದ ಶಮನವನ್ನು ಹಝ್ರತ್ ಪೈಗಂಬರ್(ಸ) ನೀಡಿದರು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಂ ಇನ್ನಕ ಹಮೀದುಮ್ಮಜೀದ್.**

ಹಝ್ರತ್ ಪೈಗಂಬರ್(ಸ)ರ ಈ ತೀರ್ಮಾನಗಳು ಕೇವಲ ವೈಯಕ್ತಿಕ ಮತ್ತು ನೈತಿಕ ಉದ್ದೇಶದಿಂದ ಆಗಿರಲಿಲ್ಲ, ಬದಲಾಗಿ ಯುದ್ಧ ದೃಷ್ಟಿಯಿಂದಲೂ ಅದು ಅತ್ಯಂತ ಉಪಯುಕ್ತವಾಗಿತ್ತು ಎಂದು ನಂತರದ ಘಟನೆಗಳಿಂದ ಸಾಬೀತಾಯಿತು. ಹಝ್ರತ್ ಪೈಗಂಬರ್(ಸ) ತನ್ನ ಯುಕ್ತಿ ಮತ್ತು ಯೋಜನೆಯ ಮೂಲಕ ಮಾತ್ರ ಅನೇಕ ಮಹತ್ತಾದ ಪ್ರಯೋಜನಗಳನ್ನು ಗಳಿಸಿದರು. ಹಝ್ರತ್ ಪೈಗಂಬರ್(ಸ) ಮಾಡಿದ ಎಲ್ಲ ಯುದ್ಧಗಳ ಮೇಲೆ ದೃಷ್ಟಿ ಹಾಯಿಸುವಾಗ ಹಝ್ರತ್ ಪೈಗಂಬರ್(ಸ)ರ ಅತ್ಯುತ್ತಮ, ಅತುಲ್ಯ ಸಾಮರ್ಥ್ಯಗಳ ಬಗ್ಗೆ ಆಶ್ಚರ್ಯಕರವಾದ ಬೆಳಕು ಬೀಳುತ್ತದೆ. ಆದರೆ ಹಝ್ರತ್ ಪೈಗಂಬರ್(ಸ)ರ ಮೊದಲಿನ ಮತ್ತು ಕೊನೆಯ ಪದವಿ ಒಬ್ಬ ಯುದ್ಧ ಪರಿಣಿತ ಎಂಬ ರೀತಿಯಲ್ಲಿ ಅಲ್ಲ. ಬದಲಾಗಿ ಒಬ್ಬ ನೈತಿಕ ಮತ್ತು ಆಧ್ಯಾತ್ಮಿಕ ನೇತಾರ ಎಂಬ ಮಟ್ಟದಲ್ಲಿ ಆಗಿತ್ತು. ಅವರ ಕೈಯಲ್ಲಿ ಉನ್ನತ ನೈತಿಕ ಸ್ವಭಾವ ಗುಣಗಳ ಧ್ವಜ ನೀಡಲ್ಪಟ್ಟಿತ್ತು. ಉನ್ನತ ನೈತಿಕ ಗುಣಗಳ ಧ್ವಜವನ್ನು ಮೇಲೆತ್ತುವ ಮತ್ತು ಮೇಲೆತ್ತುತ್ತಾ ಹೋಗುವ ಮಹತ್ತಾದ ಜಿಹಾದಿನಲ್ಲಿ ಅವರು ನಿರತರಾಗಿದ್ದರು. ಅದು ಎಂದಿಗೂ ಕೊನೆಗೊಳ್ಳದ ಎಂತಹ ಪ್ರಯತ್ನವಾಗಿತ್ತು ಎಂದರೆ, ಅದು ಯುದ್ಧದ ಸ್ಥಿತಿಗಳಲ್ಲಿ ಇದ್ದ ರೀತಿಯಲ್ಲೇ ಶಾಂತಿಯ ಸ್ಥಿತಿಯಲ್ಲೂ ಮುಂದುವರೆದಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಸತ್ಯತೆಗೆ ಬಹಳ ದೊಡ್ಡದಾದ ಒಂದು ದೃಷ್ಟಾಂತವಿತ್ತು. ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಮೊದಲು ಮುಸ್ಲಿಮರಿಗೆ ವಿಜಯ ಲಭಿಸಿತು. ಹಝ್ರತ್ ಪೈಗಂಬರ್(ಸ)ರ ಪ್ರಿಯ ದೊಡ್ಡಪ್ಪ ಯುದ್ಧದಲ್ಲಿ ವಧಿಸಲ್ಪಟ್ಟರು. ಅನಂತರ ಆರಂಭದ ದಾಳಿಯಲ್ಲಿ ಸತ್ಯನಿಷೇಧಿಗಳ ಧ್ವಜವಾಹಕ ವಧಿಸಲ್ಪಟ್ಟನು. ಅನಂತರ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರವೇ ಹಝ್ರತ್ ಪೈಗಂಬರ್(ಸ) ಸ್ವತಃ ಗಾಯಗೊಂಡರು ಮತ್ತು ಅನೇಕ ಸಹಾಬಿಯರು ಶಹೀದ್ ಆದರು. ಅದಲ್ಲದೇ ಮುಸ್ಲಿಮರಿಗೆ

ಎಂತಹ ನಿಷ್ಠೆ ಮತ್ತು ಸತ್ಯವಿಶ್ವಾಸ ತೋರಿಸಲು ಸಂದರ್ಭ ಲಭಿಸಿತು ಎಂದರೆ, ಅದರ ಉದಾಹರಣೆ ಚರಿತ್ರೆಯಲ್ಲಿ ಬೇರೆಲ್ಲೂ ಕಾಣಲು ಸಿಗುವುದಿಲ್ಲ.

(ಹುಝೂರ್ ಹೇಳಿದರು:) ಉಹುದ್ ಯುದ್ಧದ ನಂತರ ಉಂಟಾದ ಸ್ಥಿತಿಯ ಪ್ರಸ್ತಾಪ ಮತ್ತು ಹಮ್‌ರಾಉಲ್ ಅಸದ್ ಯುದ್ಧದ ಪ್ರಸ್ತಾಪ ಇಲ್ಲಿ ಕೊನೆಗೊಳ್ಳುತ್ತದೆ.

(ಹುಝೂರ್ ಹೇಳಿದರು:) ಲೋಕದ ಸ್ಥಿತಿಗಳು, ಮುಸ್ಲಿಮರ ಅವಸ್ಥೆ ಮತ್ತು ಪೆಲಸ್ತೀನಿನ ಕುರಿತು ದುಆಗಳನ್ನು ಮಾಡಲು ನಾನು ಗಮನ ಸೆಳೆಯುತ್ತಾ ಬಂದಿದ್ದೇನೆ. ಯುದ್ಧವಿರಾಮ ಕೆಲವು ಕಾಲಕ್ಕೆ ಆಗುವುದು ಎಂದು ಕೆಲವು ಪಕ್ಷಗಳು ಭಾವಿಸುತ್ತಿರುವುದಾಗಿ ತೋರುತ್ತಿದೆ. ಆದರೆ ಯುದ್ಧವಿರಾಮ ಉಂಟಾದರೂ ಕೂಡ ಪೆಲಸ್ತೀನಿಯರ ಮೇಲೆ ದೌರ್ಜನ್ಯ ಕೊನೆಗೊಳ್ಳದು ಎಂದು ಸ್ಥಿತಿಗತಿಗಳನ್ನು ನೋಡುವಾಗ ತೋರುತ್ತಿದೆ. ಆದ್ದರಿಂದ ಧಾರಾಳವಾಗಿ ದುಆಗಳನ್ನು ಮಾಡಬೇಕಾಗಿದೆ. ಅಲ್ಲಾಹನ ಕಡೆಗೆ ಬಾಗುವಂತಾಗಲು ಅಲ್ಲಾಹನು ಪೆಲಸ್ತೀನಿಯರಿಗೂ ಸೌಭಾಗ್ಯ ನೀಡಲಿ. ಹೇಗಿದ್ದರೂ ಈ ಸ್ಥಿತಿಗಳಲ್ಲಿ ಅಲ್ಲಾಹನು ಆ ಅಹಂಕಾರಿಗಳ ಸೊಕ್ಕನ್ನು ಮುರಿಯಲು ಏರ್ಪಾಡು ಮಾಡಿರುವುದಾಗಿ ತೋರುತ್ತದೆ. ಈ ಕೆಲಸ ಯಾವಾಗ ಪೂರ್ಣವಾಗುವುದು ಎಂದು ಅಲ್ಲಾಹನೇ ಬಲ್ಲನು. ಆದರೆ ಹೇಗಿದ್ದರೂ ಅವರ ಈ ಅಹಂಕಾರ ಮುರಿಯಲು ಆರಂಭವಾಗಿದೆ. ಅವರ ಒಳಗಿನಿಂದಲೇ ಅವರ ಎದುರಾಳಿಗಳು ಉಂಟಾಗಲು ಆರಂಭವಾಗಿದೆ. ಅಮೇರಿಕದಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. ಈ ಪ್ರತಿಭಟನೆಗಳನ್ನು ಅಡಗಿಸಲು ಈಗ ಬಲಪ್ರಯೋಗ ನಡೆಯುತ್ತಿದೆ. ಆದರೂ ಈ ಬೆಂಕಿಯ ಕಿಡಿ ಪ್ರಜ್ವಲಿಸುವುದು. ತಾತ್ಕಾಲಿಕವಾಗಿ ನಿಂತರೂ ಕೂಡ ಪುನಃ ಉರಿಯುವುದು. ಅಲ್ಲಾಹನು ಲೋಕದ ದೊಡ್ಡ ದೇಶಗಳಿಗೆ ಬುದ್ಧಿ ನೀಡಲಿ ಮತ್ತು ಅವರು ನ್ಯಾಯದಿಂದ ವರ್ತಿಸುವಂತಾಗಲಿ. ಅವರಿಗೆ ಸ್ವಂತಕ್ಕಾಗಿ ಒಂದು ನೀತಿ ಮತ್ತು ಇತರರಿಗಾಗಿ ಮತ್ತೊಂದು ನೀತಿ. ಇದೇ ಸಂಗತಿ ಅನಂತರ ಒಂದು ಕಾಲದಲ್ಲಿ ವಿಶ್ವಸಂಸ್ಥೆ ಇಲ್ಲವಾಗಲು ಕಾರಣವಾಗುವುದು.

(ಖುತ್ಬದ ಕೊನೆಯಲ್ಲಿ ಹುಝೂರ್ ತನ್ನ ಸ್ವಂತ ಆರೋಗ್ಯದ ಕುರಿತು ಜಮಾಅತಿಗೆ ಪ್ರೀತಿಯಿಂದ ತಿಳಿಸುತ್ತಾ ಹೇಳಿದರು:) ಇಂದು ನಾನು ಹೇಳಲು ಬಯಸುವ ಎರಡನೇ ಪ್ರಾರ್ಥನೆ ನನಗಾಗಿ ಆಗಿದೆ. ದೀರ್ಘ ಕಾಲದಿಂದ ನನಗೆ ಹೃದಯದ ವಾಲ್‌ವಿನ (valve) ಸಮಸ್ಯೆ ಇತ್ತು. ವೈದ್ಯರು ಚಿಕಿತ್ಸೆಗಾಗಿ ಹೇಳುತ್ತಿದ್ದರು, ಆದರೆ ನಾನು ಅದನ್ನು ಮುಂದೂಡುತ್ತಿದ್ದೆ. ಇನ್ನು ಕಾಯುವುದು ಸೂಕ್ತವಲ್ಲ ಎನ್ನುವಂತಹ ಹಂತ ಬಂದಿರುವುದರಿಂದ ಅವರ ಕೋರಿಕೆಯ ಮೇರೆಗೆ ಕೆಲವು ದಿನಗಳ ಹಿಂದೆ ವಾಲ್ವ್ (valve) ಬದಲಾಯಿಸುವ ಪ್ರಕ್ರಿಯೆ ನಡೆದಿದೆ. ವೈದ್ಯರ ಸೂಚನೆಯಂತೆ ನನಗೆ ಕೆಲವು ದಿನಗಳ ವರೆಗೆ ಮಸೀದಿಗೆ ಬರಲು ಸಾಧ್ಯವಾಗಿರಲಿಲ್ಲ. ಈಗ ನಾನು ಗುಣಮುಖನಾಗಿದ್ದೇನೆ. **ಅಲ್‌ಹಮ್ದುಲಿಲ್ಲಾಹ್**. ಅಲ್ಲಾಹನ ಕೃಪೆಯಿಂದ ಈಗ ಆಗಬೇಕಿದ್ದ ವೈದ್ಯಕೀಯ ಚಿಕಿತ್ಸೆ ಯಶಸ್ವಿಯಾಗಿದೆ ಎನ್ನುತ್ತಾರೆ ವೈದ್ಯರು. ಅಲ್ಲಾಹನು ದಯಪಾಲಿಸುವಷ್ಟು ಜೀವನ ಸಕ್ರಿಯ ಜೀವನವಾಗಿರಲಿ ಎಂದು ಪ್ರಾರ್ಥಿಸಿರಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak',** Islamabad, Tilford, UK.* On 03-05-2024

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon